**OS. No.239/2022** **PW – 1**

ಪ್ರಮಾಣೀಕರಿಸಲಾದ ದಿನಾಂಕಃ-**22.06.2026.**

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ ಜಿ ವಿ ವಕೀಲರಿಂದಃ

ನನ್ನ ಮುಂದುವರೆದ ಮುಖ್ಯ ವಿಚಾರಣೆ ಸಲುವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ನಿ.ಪಿ. 11 : ಸಾಕ್ಷಿ ತಂದೆಯ ಮರಣ ಪ್ರಮಾಣಪತ್ರ
ನಿ.ಪಿ. 12 : ಸಾಕ್ಷಿಯ ತಾಯಿಯ ಮರಣ ಪ್ರಮಾಣ ಪತ್ರ

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ

ನಾನು ಹಾಜರುಪಡಿಸಿರುವ ನಿಪಿ.11 ರಲ್ಲಿ ಎಸ್.ಟಿ.ನರಸಿಂಹಮೂರ್ತಿಯವರ ಮರಣ ದಿಃ 03.12.2002 ಎಂದು ಇದ್ದು ಪ್ರಮಾಣ ಪತ್ರ ನೀಡಿದ ದಿನಾಂಕಃ17.03.2023 ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಈ ದಾವೆಯ ವಿಚಾರ ನೀಡಿದ ನಂತರ ಅರಸೀಕೆರೆ ನ್ಯಾಯಾಲಯದಲ್ಲಿ ಸಿ.ಮಿಸ್ ಸಂ. 1046/2025 ಎಂದು ಅರ್ಜಿ ದಾಖಲಿಸಿ ನಿಪಿ.12 ನ್ನು ಪಡೆಯಲಾಗಿದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಈ ದಾವೆಯ 1 ರಿಂದ 3 ನೇ ಪ್ರತಿವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಪಿ.12 ಕ್ಕೂ ಮೊದಲು ನಾನು ಪಡೆದಿರುವ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುತ್ತದೆ ಎಂದರೆ ಇಲ್ಲ ಇದೇ ಮೊದಲ ಬಾರಿಗೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಹಿಂದೆ ನಾನು ಪಾಟೀ ಸವಾಲಿನಲ್ಲಿ ನನ್ನ ತಾಯಿಯ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುತ್ತದೆ ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದು ಸಾಕ್ಷಿ ನುಡಿದಿದ್ದು ಈಗ ಅಂತಹ ದಾಖಲೆ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ, ನರಸಿಂಹಮೂರ್ತಿ ಹಾಗೂ ರಂಗಮ್ಮವರಿಗೂ ಯಾವುದೇ ಸಂಬಂಧ ಇರುವುದಿಲ್ಲ ನಿಪಿ.11 ಮತ್ತು 12 ದಾಖಲೆಯನ್ನು ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ

**OS. No.239/2022**

**PW – 1**

ನಮೂದಾಗಿರುವ ಎಲ್ಲಾ ಹೆಸರುಗಳು ನಿಪಿ.8 ದೃಢೀಕರಣದಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ, ಅವರ ಆಧಾರ್ ಕಾರ್ಡ್ ಕೇಳಿದ್ದು ಅವರು ನಮ್ಮ ಒಡನೆ ಚೆನ್ನಾಗಿಲ್ಲದ ಕಾರಣ ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಆ ರೀತಿ ಆಧಾರ್ ಕಾರ್ಡ್ ಗಳನ್ನು ಕೊಡದೇ ಇದ್ದಲ್ಲಿ ದೃಢೀಕರಣ ಪತ್ರ ನೀಡುವುದಿಲ್ಲ ಎಂದರೆ ಸರಿಯಲ್ಲ ಎಂದು ನುಡಿದಿರುತ್ತಾರೆ ಅಕ್ರಮ ಲಾಭ ಪಡೆಯಲು ದಾಖಲೆಗಳನ್ನು ಸೃಷ್ಠಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ